ಗೊಂದಲಗೊಳ್ಳಬೇಡಿ! ಗಾಬರಿಗೊಳ್ಳಬೇಡಿ!ರೋಗಿಯನ್ನು ಸಮಾಧಾನಗೊಳಿಸಿ!

**ಏನನ್ನು ಮಾಡಬೇಕು**

ಕಡಿತಕ್ಕೊಳಗಾದ ಕಾಲು ಅಥವ ಕೈಯನ್ನು ಅಲುಗಾಡಿಸದಂತೆ ನೋಡಿಕೊಳ್ಳಿ ಮತ್ತು ರೋಗಿಯನ್ನು ಸಮಾಧಾನಗೊಳಿಸಿ. ಇದರಿಂದ ರಕ್ತದೊತ್ತಡ ಸಹಜವಾಗಿರುವುದು ಮತ್ತು ವಿಷವು ವೇಗವಾಗಿ ದೇಹದ ಇತರ ಭಾಗಗಳಿಗೆ ಹರಡುವುದಿಲ್ಲ.

ಕೈಗಡಿಯಾರ, ಆಭರಣಗಳನ್ನು ತೆಗೆಯುವುದು ಲೇಸು, ಇಲ್ಲದಿದ್ದಲ್ಲಿ ಕಡಿತದ ಜಾಗ ಊದಬಹುದು.

ಕಡಿತದ ಭಾಗವು ರೋಗಿಯ ಹೃದಯದ ಮಟ್ಟ ಅಥವಾ ಅದಕ್ಕಿಂತ ಕೆಳ ಮಟ್ಟದಲ್ಲಿರುವಂತೆ ನೋಡಿಕೊಳ್ಳಿ.

ತೆಳ್ಳಗಿನ ಮರದ ತುಂಡನ್ನು ಕಡಿತದ ಭಾಗದಲ್ಲಿಟ್ಟು ಕ್ರೇಪ್ ಬಾಂಡೇಜ್ ಅಥವಾ ಮೃದುವಾದ ಬಟ್ಟೆಯಿಂದ ತುಂಬಾ ಬಿಗಿಯಾಗಿಲ್ಲದಂತೆ ಕಟ್ಟಬೇಕು.

**ಏನನ್ನು ಮಾಡಬಾರದು**

ಗಾಯದ ಜಾಗವನ್ನು ಕುಯ್ಯುವುದು ಅಥವಾ ವಿಷವನ್ನು ಹೊರತೆಗೆಯುವ ಯತ್ನ ಮಾಡಬೇಡಿ.

ರಕ್ತ ಸಂಚಾರಕ್ಕೆ ಧಕ್ಕೆ ತರುವಂತದ್ದನ್ನು ಉಪಯೋಗಿಸಬಾರದು ಅಥವಾ ಕಡಿತದ ಭಾಗದಲ್ಲಿ ಮಂಜುಗಡ್ಡೆಯನ್ನು ಉಪಯೋಗಿಸಬಾರದು.

ಕಾಫಿ, ಟೀ ಅಥವಾ ಮದ್ಯಪಾನವನ್ನು ಸೇವಿಸಬಾರದು.

ಹಾವನ್ನು ಕೈಯಲ್ಲಿ ಹಿಡಿಯಲು ಯತ್ನಿಸಬೇಡಿ. ತಮ್ಮ ಮೊಬೈಲ್ ಫೋನಿನ ಕ್ಯಾಮರಾದಿಂದ ದೂರದಿಂದ ಉತ್ತಮ ಗುಣಮಟ್ಟದ ಛಾಯಚಿತ್ರವನ್ನು ತೆಗೆಯಲು ಸಾಧ್ಯವಿದ್ದರೆ ವಿಷವಿರುವ ಮತ್ತು ವಿಷವಿಲ್ಲದಿರುವ ಹಾವನ್ನು ಗುರುತಿಸಲು ಅನುಕೂಲವಾಗುವುದು ಮತ್ತು ಅದಕ್ಕನುಗುಣವಾಗಿ ವೈದ್ಯೋಪಚಾರವನ್ನು ಆರಂಭಿಸಬಹುದು.

ಹಾವಿನ ಕಡಿತದ ಜಾಗದಲ್ಲಿ ನಿಲ್ಲದ ರಕ್ತ ಸ್ರಾವ, ಉಸಿರಾಡಲು ತೊಂದರೆ, ಕಣ್ಣು ರೆಪ್ಪೆಯ ಮೇಲೆ ಹಿಡಿತವಿಲ್ಲದಿರುವುದು ಮತ್ತು ಕಡಿತಕ್ಕೊಳಗಾದ ಜಾಗ ಊದುವುದು ಮತ್ತಿನ್ನಿತರ ಕುರುಹು ಕಂಡುಬಂದಲ್ಲಿ ವಿಷದ ಹಾವಿನ ಕಡಿತಕ್ಕೆ ವೈದ್ಯೋಪಚಾರವನ್ನು ಆರಂಭಿಸಬಹುದು.

ಭಾರತದಲ್ಲಿ ಶೇಖಡಾ ೧೦ ಪ್ರತಿಶತ ಹಾವುಗಳಿಗೆ ಮಾತ್ರ ವಿಷವಿರುತ್ತದೆ. ಮತ್ತು ಅದರಲ್ಲಿ ಕೂಡ ಬಹುಪಾಲು ವಿಷಯುಕ್ತ ಹಾವಿನ ಕಡಿತಗಳು ಪ್ರಾಣಹಾನಿ ಮಾಡಲಾರದು.

ಆಸ್ಪತ್ರೆಯಲ್ಲಿ ಸಿಗುವ ಮದ್ದೊಂದೇ ಇದಕ್ಕೆ ಪರಿಹಾರ. ಸಾಂಪ್ರಾದಾಯಿಕ ಮದ್ದು ಅಥವ ನೈಸರ್ಗಿಕ ಮದ್ದನ್ನು ರೋಗಿಯ ಚಿಕಿತ್ಸೆಗಾಗಿ ಉಪಯೋಗಿಸಬಾರದು.



